
ರೀತಿ ಅನ್ನಿಸುತ್ತಾರೆ. ಆದರೆ, ಆಫ್ರಿಕನ್ ಅಮೆರಿಕನ್ ಸಂಪ್ರದಾಯದಲ್ಲಿ ನೋಡಿ ಡ್ಯೂಕ್ ಎಲಿಂಗ್ಟನ್, ಸಿಡ್ನಿ ಬೆಚೆಟ್ ಅಥವಾ ಮೈಲ್ಸ್ ಡೇವಿಸ್ (ಸಂಗೀತಗಾರರು) ಇವೆರಲ್ಲರ ಶೈಲಿಯಲ್ಲಿ ಭಿನ್ನತೆಯಿದೆ. ಅದೇ ರೀತಿ ಜಾರ್ಜ್ ಹಾಡುಗಾರ್ತಿಯರನ್ನು ನೋಡಿ ಬಿಲ್ಲಿ ಹಾಲಿಡೆ, ಸಾರಾ, ನೀನಾ, ಅರೆಥಾರ ನಡುವೆ ಕೂಡ ಭಿನ್ನತೆಯಿದೆ. ಇಂತಹ ಅನನ್ಯತೆಯನ್ನು ಹೊಂದಿರುವುದು ಅದ್ಭುತ. ನನಗೆ ಆ ರೀತಿ ಬರೆಯಲು ಇಷ್ಟ. ನನ್ನ ಕಾದಂಬರಿಗಳಲ್ಲಿ ನನ್ನತನ ಆ ರೀತಿ ಇರಬೇಕು. ನನ್ನ ಕಾದಂಬರಿಗಳು ಮೊದಲು ಆಫ್ರಿಕನ್ ಅಮೆರಿಕನ್ ಸಂಪ್ರದಾಯದಲ್ಲಿ ಅನಂತರದಲ್ಲಿ ಸಾಹಿತ್ಯದಲ್ಲಿ ಸ್ಥಾನ ಪಡೆಯುತ್ತವೆ.

◆ **ಆಫ್ರಿಕನ್ ಅಮೆರಿಕನ್ ಸಂಪ್ರದಾಯದಲ್ಲೇ ಯಾಕೆ ಗುರುತಿಸಿಕೊಳ್ಳಲು ಬಯಸುವಿರಿ?**

ಅದರಲ್ಲಿ ಹೆಚ್ಚು ಶ್ರೀಮಂತವಾದ ಸಂಪನ್ಮೂಲಗಳಿವೆ. ಅಂಚಿನಲ್ಲಿರುವುದನ್ನು ಒಳಗೊಂಡಿದ್ದು ಹೆಚ್ಚು ಆಧುನಿಕವಾಗಿದೆ. ಅದರಲ್ಲಿ ಮನುಷ್ಯ ಕುಲದ ಭವಿಷ್ಯವಿದೆ.

◆ **ಅಂದರೆ ಲೇಖಕಿ ಅನ್ನುವುದಕ್ಕಿಂತ ಆಫ್ರಿಕನ್ ಅಮೆರಿಕನ್ ಲೇಖಕಿ ಅನ್ನುವುದು ಮುಖ್ಯವೇ?**

ನನ್ನ ಕೃತಿ ಆಫ್ರಿಕನ್ ಅಮೆರಿಕನ್ ಆಗಿರುವುದು ಮುಖ್ಯ. ಅದು ಸಾಹಿತ್ಯವೆನ್ನುವ ದೊಡ್ಡ ಸಾಗರದಲ್ಲಿಯೂ ಹೊಂದಿಕೊಂಡರೆ ಸಂತೋಷ. ಆದರೆ, ಅದಕ್ಕಾಗಿಯೇ ಬರಿ ಅಂತ ನನ್ನ ಒತ್ತಾಯಿಸಬಾರದು. ಜಾಯ್ಸ್‌ಗಾಗಲಿ ಟಾಲ್‌ಸ್ಟಾಯ್‌ಗಾಗಲಿ ಯಾರೂ ಹಾಗೆ ಹೇಳಲಿಲ್ಲ. ಅವರನ್ನು ರಷ್ಯನ್, ಫ್ರೆಂಚ್, ಐರಿಷ್, ಕ್ಯಾಥೊಲಿಕ್ ಹೀಗೆ ಯಾವುದೇ ಹೆಸರಿನಿಂದ ಗುರುತಿಸಿದರೂ ಅವರು ಎಲ್ಲಿಂದ ಬಂದಿದ್ದರೋ ಅಲ್ಲಿನದನ್ನೇ ಬರೆದರು. ನಾನು ಕೂಡ ಹಾಗೆ, ಆಫ್ರಿಕನ್ ಅಮೆರಿಕನ್. ಅಲ್ಲಿನದೆಲ್ಲವೂ ನನ್ನೊಳಗಿವೆ. ಅವೆಲ್ಲವೂ ನನಗೆ ಮುಖ್ಯ.




◆ **ನಿಮ್ಮ ಕೃತಿಗಳ ಬಗೆಗಿನ ವಿಮರ್ಶೆಗಳನ್ನು ಓದುವಿರಾ?**

ಹೌದು.

◆ **ನಿಮ್ಮನ್ನು ಮಾಂತ್ರಿಕ ವಾಸ್ತವವಾದಿ ಲೇಖಕ ಮಾರ್ಕ್ವೆಜ್‌ಗೆ ಹೋಲಿಸಿದಾಗ ಅಚ್ಚರಿಯಾಯಿತೇ?**

ಹೌದು. ಯಾವುದೇ ಪಂಥ ಸಾಹಿತ್ಯದ ಪಾಠ ಮಾಡುವಾಗಷ್ಟೇ ನನಗೆ ಮುಖ್ಯವಾಗುತ್ತದೆ. ಖಾಲಿ ಬಿಳಿಹಾಳೆಗಳ ಮುಂದೆ ಕೂತಾಗ... ಏನಂತ ಹೇಳಲಿ? ಮಾಂತ್ರಿಕ ವಾಸ್ತವವಾದಿ ಎಂದೇ? ಪ್ರತಿಯೊಂದು ವಸ್ತು ತನ್ನದೇ ರೂಪವನ್ನು ಪಡೆಯುತ್ತದೆ.

◆ **ಜೀವನವನ್ನು ಇಡಿಯಾಗಿ ಜೀವಿಸುವವರೆಗೆ, ಅನುಭವಗಳನ್ನು ಪಡೆಯುವವರೆಗೆ ನಾನು ಬರೆಯಲಾರೆ ಎಂದು ಕೆಲವರು ಹೇಳುತ್ತಾರಲ್ಲ...**

ಬಹುಶಃ ಅವರಿಗೆ ಸಾಧ್ಯವಾಗದಿರಬಹುದು. ಆದರೆ, ಎಲ್ಲೂ ಹೋಗದ ಮಂದಿ ಕೂಡ ಬರವಣಿಗೆ ಮಾಡಿದ್ದುಂಟು. ಆ ತರಹದ ಕಲ್ಪನಾ ಸಾಮರ್ಥ್ಯ ನಿಮ್ಮೊಳಗೆ ಇರುತ್ತದೆ ಇಲ್ಲವೇ ಅಂತಹದ್ದನ್ನು ನೀವು ಸಾಧಿಸಿರುತ್ತೀರಿ. ಕೆಲವೊಮ್ಮೆ ನಿಮ್ಮನ್ನು ಕೆಣಕುವಂತಹ ಕಿಡಿಯೊಂದು ಬೇಕಾಗುತ್ತದೆ. ನಾನೆಂದೂ